**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.2751/2025**

| | | |
|---|---|---|
| ಸಾಕ್ಷಿದಾರರ ಹೆಸರು | : ರೇಣುಕಾ ಡಿ.ವಿ | ಪ್ರಾಸಾ-4 |
| ಗಂಡನ ಹೆಸರು | : ಜಗದೀಶ್ ಎಸ್.ಜಿ | ಚಾಸಾ-1 |
| ವಯಸ್ಸು | : 49 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಎಸ್.ಐ | ದಿನಾಂಕಃ 11.08.2026. |
| ವಾಸಸ್ಥಳ | : ನಗರ ಪೋಲಿಸ್ ಠಾಣೆ, ಚಿಕ್ಕಮಗಳೂರು. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ನವೆಂಬರ್ 2023 ರಿಂದ ಜನವರಿ 2024 ರವರೆಗೂ ಮತ್ತು ಜೂನ್ 2024 ರಿಂದ 2026 ಮಾರ್ಚ್ ರವರೆಗೂ ಬಣಕಲ್ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.17.07.2025 ರಂದು ಸ.5.40 ರ ಸಮಯಕ್ಕೆ ಚಾಸಾ-4 ರಿಂದ 6 ರವರೊಟ್ಟಿಗೆ ಗಸ್ತು ಕಾರ್ಯಾಚರಣೆಯಲ್ಲಿ ಇರುವಾಗ, ಬಿಳ್ಳೂರು ಕ್ರಾಸ್ ನ ಬಳಿ ಆರೋಪಿಯು ಅಕ್ರಮವಾಗಿ ಮದ್ಯ ಮಾರಾಟವನ್ನು ಮಾಡುತ್ತಿರುವ ಮಾಹಿತಿಯು ಬಂದ ಮೇರೆಗೆ ಸ.6.00 ಸಮಯಕ್ಕೆ ದಾರಿ ಹೋಕರಾದ ಚಾಸಾ-2 ಮತ್ತು 3 ರವರಿಗೆ ಪ್ರಕರಣದ ಮಾಹಿತಿ ತಿಳಿಸಿ ಅವರಿಗೆ ಪಂಚರಾಗಿ ಹಾಜರಾಗುವಂತೆ ಕೇಳಿಕೊಂಡ ಮೇರೆಗೆ ಅವರುಗಳು ಒಪ್ಪಿದ್ದು, ಅವರುಗಳಿಗೆ ನೋಟೀಸನ್ನು ಜಾರಿ ಮಾಡಿರುತ್ತೇನೇ. ನಂತರ ಸದರಿಯವರೊಟ್ಟಿಗೆ ಬಿಳ್ಳೂರು ಕ್ರಾಸ್ ನ ಬಳಿ ಹೋಗಿ ನೋಡಲಾಗಿ, ಸಾರ್ವಜನಿಕ ಸ್ಥಳದಲ್ಲಿ ಒಬ್ಬ ಆಸಾಮಿಯು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಮದ್ಯವನ್ನು ಇಟ್ಟುಕೊಂಡು ನಮ್ಮನ್ನು ನೋಡಿದ ತಕ್ಷಣ ಓಡಲು ಪ್ರಯತ್ನಿಸಿದ್ದು, ಚಾಸಾ-4 ರವರು ಸದರಿಯವರು ಹಿಡಿದು ನನ್ನ ಸಮಕ್ಷಮ ಹಾಜರುಪಡಿಸಿದ್ದು, ಅವರನ್ನು ವಿಚಾರಿಸಲಾಗಿ ಸದರಿಯವರ ಹೆಸರು ಪ್ರದೀಪ್, ಬಿಳ್ಳೂರು ವಾಸಿ ಎಂದು ತಿಳಿಸಿದ್ದು, ನಂತರ ಅವರ ಬಳಿ ಇದ್ದ ಬಿಳಿ ಚೀಲವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ DK double kick fine whiskey 90 ml ನ 72 ಟೆಟ್ರಾ ಪ್ಯಾಕೇಟ್ ಗಳು ಇದ್ದು ಅವುಗಳನ್ನು ಮಾರಾಟ ಮಾಡಲು ಯಾವುದಾದರು ಪರವಾನಿಗೆ ಇದೆಯಾ ಎಂದು ಕೇಳಲಾಗಿ ಸದರಿಯವರಿಗೆ ಯಾವುದೇ ಪರವಾನಿಗೆಇಲ್ಲ ಎಂದು ತಿಳಿದು ಬಂದಿರುತ್ತದೆ.

ನಂತರ ಸ್ಥಳದಲ್ಲಿ ಲ್ಯಾಪ್ ಟಾಪ್ ನಿಂದ ವರದಿಯನ್ನು ತಯಾರಿಸಿ ಚಾಸಾ-7 ರವರ ಬಳಿ ಠಾಣೆಗೆ ಕಳುವುಸಿಕೊಟ್ಟಿರುತ್ತೇನೆ. ನಂತರ ಠಾಣಾ.ಮೊ.ನಂಬರ್ ನ್ನು ಪಡೆದು ಸ.7.35 ರಿಂದ 8.15 ರವರೆಗೂ ಮಹಜರ್ ಕ್ರಮವನ್ನು ಜರುಗಿಸಿ, ಸದರಿ ಸಮಯದಲ್ಲಿ ಫೋಟೋ ಮತ್ತು ವಿಡಿಯೋವನ್ನು ಚಿತ್ರೀಕರಿಸಿ ಆರೋಪಿ ಹಾಗೂ ಮಾಲು ಸಹಿತ ಠಾಣೆಗೆ ಹಾಜರಾಗಿ ಅಮಾನತುಪಡಿಸಿಕೊಂಡಿದ್ದ ಮದ್ಯವನ್ನು ಠಾಣಾ.ಮಾ.ಸಂ.58/2025 ಕ್ಕೆ ಅಳವಡಿಸಿ ಆರೋಪಿಗೆ 35(3) ರ BNSS ಅಡಿಯಲ್ಲಿ ನೋಟೀಸ್ ಜಾರಿ ಮಾಡಿರುತ್ತೇನೆ. ನಂತರ ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ-15 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ದಿ.17.07.2025 ರಂದು ತಯಾರಿಸಿದ ವರದಿಯನ್ನು ನಿಪಿ-5, ಸಾಕ್ಷಿಯ ಸಹಿ ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-1 ಮತ್ತು 3 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಡಿ) ಮತ್ತು 3(ಸಿ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ಚಾಸಾ-6 ರವರಿಂದ ಪಡೆದ ಸಿಡಿಯನ್ನು ನಿಪಿ-6 ಮತ್ತು ಕಲಂ 63(4)(ಸಿ) of BSA ರಡಿಯ ಪ್ರತಿಯನ್ನು ನಿಪಿ-7 ಮತ್ತು ಸಾಕ್ಷಿಯ ಸಹಿಯನ್ನು ಕ್ರಮವಾಗಿ ನಿಪಿ-6(ಎ) ಮತ್ತು 7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ಎಂ.ಒ.1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಎಂ.ಒ.2 ನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ತಾವು ದಾಳಿ ಮಾಡಿದ ಕಾಲಕ್ಕೆ ಅಕ್ರಮ ಮದ್ಯಮಾರಾಟ ಮಾಡಿದ ವ್ಯಕ್ತಿ ಎಂದು ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ**

ನಾವು ನೋಡಿದಾಗ ಆರೋಪಿಗಳು ಸಾರ್ವಜನಿಕರಿಗೆ ಮದ್ಯವನ್ನು ಮಾರಾಟ ಮಾಡುತ್ತಿರಲಿಲ್ಲ. ಅದೇ ರೀತಿಯಾಗಿ ಎಂ.ಒ.1 ಮತ್ತು 2 ನ್ನು ಅವರ ಕೈನಲ್ಲಿ ಹಿಡಿದುಕೊಂಡಿರಲಿಲ್ಲ. ಆರೋಪಿಗಳು ಅಂದಾಜು 50 ಮೀಟರ್ ದೂರದವರೆಗೂ ಓಡಿ ಹೋಗಿದ್ದರು. ಅವರನ್ನು ಹಿಡಿದಾಗಲೂ ಸಹಾ ಅವರ ಕೈನಲ್ಲಿ ಎಂ.ಒ.1 ಮತ್ತು 2 ಇರಲಿಲ್ಲ. ಸಾಕ್ಷಿಯು ಮುಂದುವರೆದು ಆರೋಪಿಗಳು ಅವುಗಳನ್ನು ಬಿಟ್ಟು ಓಡಿ ಹೋಗಲು ಪ್ರಯತ್ನಿಸಿದ್ದರು ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಿಪಿ-1 ಅಥವಾ 5 ರಲ್ಲಿ ನಮೂದಿಸಿರುವುದಿಲ್ಲ. ಅದೇ ರೀತಿಯಾಗಿ ಎಂ.ಒ.1 ರ ಮೇಲೆ ಯಾವುದೇ ಬರವಣಿಗೆ ಇರಲಿಲ್ಲ. ಆದರೆ ನ್ಯಾಯಾಲಯದ ಮುಂದಿರುವ ಎಂ.ಒ.1 ರ ಮೇಲೆ ಬರವಣಿಗೆ ಇರುತ್ತದೆ ಎಂದರೆ ಸರಿ. ಎಂ.ಒ.2 ನ್ನು ನಾವು ವಶಪಡಿಸಿಕೊಂಡ ನಂತರದಲ್ಲಿ ಮುಟ್ಟಿರುವುದಿಲ್ಲ. ಎಂ.ಒ.2 ರ ಮೇಲೆ ಬ್ಯಾಚ್ ನಂಬರ್ ನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ-5 ನ್ನು ಯಾವುದರ ಸಹಾಯದಿಂದ ಬರವಣಿಗೆ ಮಾಡಲಾಗಿರುತ್ತದೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ-5 ನ್ನು ಕತ್ತಲೆ ಆವರಿಸಿದ ನಂತರದಲ್ಲಿ ಬರವಣಿಗೆ ಮಾಡಲಾಗಿರುತ್ತದೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.2751/2025**

| | | |
|---|---|---|
| ಸಾಕ್ಷಿದಾರರ ಹೆಸರು | : ರಘು ಎಂ | ಪ್ರಾಸಾ-3 |
| ತಂದೆಯ ಹೆಸರು | : ಮಂಜುನಾಥ್ | ಚಾಸಾ-4 |
| ವಯಸ್ಸು | : 35 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಸಿ.ಪಿ.ಸಿ. | ದಿನಾಂಕಃ 11.08.2026. |
| ವಾಸಸ್ಥಳ | : ಬಣಕಲ್ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು 2024 ರಿಂದ ಇಲ್ಲಿಯವರೆಗೂ ಬಣಕಲ್ ಪೋಲಿಸ್ ಠಾಣೆಯಲ್ಲಿ ಸಿ.ಪಿ.ಸಿ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2024 ನೇ ಸಾಲಿನಲ್ಲಿ ನಾನು ಕರ್ತವ್ಯದಲ್ಲಿ ನಿರತನಾಗಿರುವಾಗ ದಿ.17.07.2025 ರಂದು ಚಾಸಾ-1 ರವರೊಟ್ಟಿಗೆ ಗಸ್ತಿನಲ್ಲಿ ಇರುವಾಗ ಚಾಸಾ-1 ರವರಿಗೆ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದಾಗಿ ಬಂದ ಮಾಹಿತಿಯ ಮೇರೆಗೆ, ರಸ್ತೆಯಲ್ಲಿ ಹೋಗುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಪಂಚರಾಗಿ ಹಾಜರಾಗುವಂತೆ ಕೇಳಿಕೊಂಡು ಮತ್ತು ಸದರಿಯವರಿಗೆ ನೋಟೀಸನ್ನು ಜಾರಿ ಮಾಡಿ, ನಂತರ ಆರೋಪಿಗಳು ಓಡಿ ಹೋಗುವ ಸಂಭವವಿದ್ದು ಚಾಸಾ-1 ರವರ ಆದೇಶದ ಮೇರೆಗೆ ನಾನು ಮತ್ತು ಚಾಸಾ-5 ರವರು ಆರೋಪಿಗಳನ್ನು ಚಾಸಾ-1 ರವರ ಮುಂದೆ ಹಾಜರುಪಡಿಸಿರುತ್ತೇವೆ. ನಂತರ ಚಾಸಾ-1 ರವರು ಆರೋಪಿಗಳನ್ನು ವಿಚಾರಿಸಲಾಗಿ, ಸದರಿಯವರಿಗೆ ಮದ್ಯ ಮಾರಾಟ ಮಾಡಲು ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿದು ಬಂದಿರುತ್ತದೆ. ನಂತರ ಚಾಸಾ-1 ರವರು ಚಾಸಾ-6 ರವರ ಮುಖೇನ ಸ್ಥಳದಲ್ಲಿಯೇ ವರದಿಯನ್ನು ತಯಾರಿಸಿ ಚಾಸಾ-7 ರವರ ಮುಖೇನ ಸದರಿ ವರದಿಯನ್ನು ಠಾಣೆಗೆ ಕಳುಹಿಸಿಕೊಡಲಾಗಿರುತ್ತದೆ. ನಂತರ ಠಾಣೆಯಿಂದ ಠಾಣಾ.ಮೊ.ಸಂಖ್ಯೆಯನ್ನು ಸ್ವೀಕರಿಸಿಕೊಂಡು ಆರೋಪಿಗಳ ವಶದಲ್ಲಿ ಇದ್ದಂತಹ 90ml ನ DK double kick fine whiskey 72 ಟೆಟ್ರಾ ಪ್ಯಾಕೇಟ್ ಗಳ ಮಹಜರ್ ಕ್ರಮವನ್ನು ಜರುಗಿಸಿ ಚಾಸಾ-2 ಮತ್ತು 3 ರವರ ಸಮಕ್ಷಮ ವಶಕ್ಕೆ ಪಡೆದುಕೊಂಡಿರುತ್ತೇವೆ. ಸಾಕ್ಷಿಯು ಆರೋಪಿಗಳನ್ನು ಮತ್ತು ವಶಕ್ಕೆ ಪಡೆದುಕೊಂಡ ಮುದ್ದೆ ಮಾಲುಗಳನ್ನು ಪುನಃ ನೋಡಿದ್ದಲ್ಲಿ ಗುರುತಿಸುವುದಾಗಿ ನುಡಿದಿರುತ್ತಾರೆ.

ಸಾಕ್ಷಿಯು ನಿಪಿ-1 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ರೊಳಗಿರುವ ಟೆಟ್ರಾ ಪ್ಯಾಕೇಟ್ ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಎಂ.ಒ.2 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ತಾವು ದಾಳಿ ಮಾಡಿದ ಕಾಲಕ್ಕೆ ಅಕ್ರಮ ಮದ್ಯಮಾರಾಟ ಮಾಡಿದ ವ್ಯಕ್ತಿ ಎಂದು ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ**

ಆರೋಪಿಗಳನ್ನು ದಸ್ತಗಿರಿ ಮಾಡಿದ ಸ್ಥಳದ ಚೆಕ್ಕುಬಂದಿಯು ಪೂರ್ವಕ್ಕೆ ಅಶೋಕ್ ರವರಿಗೆ ಸೇರಿದ ರೈಸ್ ಮಿಲ್, ಪಶ್ಚಿಮಕ್ಕೆ ಪ್ರದೀಪ್ ರವರ ವಾಸದ ಮನೆ, ಉತ್ತರಕ್ಕೆ ಅಶೋಕ್ ರವರಿಗೆ ಸೇರಿದ ಜಮೀನು ಮತ್ತು ದಕ್ಷಿಣಕ್ಕೆ ಗೌಡನಹಳ್ಳಿಗೆ ಹೋಗುವ ರಸ್ತೆ ಇರುತ್ತದೆ. ನಾವು ದಾಳಿ ಮಾಡುವ ಪೂರ್ವದಲ್ಲಿ ಆರೋಪಿಗಳು ನಮ್ಮನ್ನು ನೋಡಿ ಅಂದಾಜು 50 ಮೀಟರ್ ದೂರ ಓಡಿ ಹೋಗಿರುತ್ತಾರೆ. ನಾವು ಆರೋಪಿಗಳನ್ನು ದಸ್ತಗಿರಿ ಮಾಡಿದಾಗ ವಾತಾವರಣ ಮಬ್ಬಾಗಿತ್ತು. ನಾವು ಆರೋಪಿಗಳನ್ನು ದಸ್ತಗಿರಿ ಮಾಡಿದಾಗ ಎಂ.ಒ.1 ಮತ್ತು 2 ಅವರ ವಶದಲ್ಲಿ ಇರಲಿಲ್ಲ. ಸದರಿ ವಿಷಯವನ್ನು ಎಂ.ಒ.1 ರಲ್ಲಿ ನಮೂದಿಸಲಾಗಿರುವುದಿಲ್ಲ. ಎಂ.ಒ.1 ಮತ್ತು 2 ಇದ್ದ ಸ್ಥಳದ ಚೆಕ್ಕುಬಂದಿಯನ್ನು ಹೇಳಲು ಸಾದ್ಯವಿಲ್ಲ. ನಿಪಿ-1 ರಲ್ಲಿ ಎಂ.ಒ.1 ಮತ್ತು 2 ಇದ್ದಂತಹ ಸ್ಥಳದ ಚೆಕ್ಕುಬಂದಿಯನ್ನು ನಮೂದಿಸಲಾಗಿರುತ್ತದೆ. ರಾ.8.00 ರ ಸಮಯಕ್ಕೆ ನಿಪಿ-1 ನ್ನು ಬರವಣಿಗೆ ಮಾಡಲಾಗಿರುತ್ತದೆ. ನಿಪಿ-1 ನ್ನು ಯಾವುದರ ಸಹಾಯದ ಮುಖಾಂತರ ಬರವಣಿಗೆ ಮಾಡಲಾಗಿದೆ ಎಂದು ಅದರಲ್ಲಿ ನಮೂದಿಸಿರುವುದಿಲ್ಲ. ಅಂದಾಜು 8.00 ರಿಂದ 8.02 ರ ಸಮಯಕ್ಕೆ ನಿಪಿ-1 ಕ್ಕೆ ಎಲ್ಲರೂ ಸಹಿ ಮಾಡಿರಬಹುದು. ಆರೋಪಿಗಳಿಂದ ವಶಪಡಿಸಿಕೊಂಡಂತಹ ಎಂ.ಒ.2 ಕ್ಕೆ ಕ್ರಮ ಸಂಖ್ಯೆಗಳನ್ನು ನೀಡಿರುವುದಿಲ್ಲ. ಅಂದಾಜು 8.02 ರ ಸಮಯಕ್ಕೆ ಮಹಜರ್ ಕ್ರಮವನ್ನು ಸಂಪೂರ್ಣಗೊಳಿಸಿ ಸ್ಥಳದಿಂದ ಹೊರಟಿರುತ್ತೇವೆ.

ಮಹಜರ್ ಕ್ರಮವನ್ನು ಜರುಗಿಸಿರುವ ಸಮಯವು ನಿಪಿ-1 ರಲ್ಲಿ ಬರೆದಿರುವುದು ಸರಿಯೋ ಅಥವಾ ನಾನು ಹೇಳಿದ ಸಮಯ ಸರಿಯೋ ಎಂದರೆ ಸಾಕ್ಷಿಯು ನಿಪಿ-1 ರಲ್ಲಿ ಬರೆದಿರುವ ಸಮಯ ಸರಿಯಾಗಿರುತ್ತದೆ ಮತ್ತು ನಾನು ಅಂದಾಜಿನ ಮೇಲೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯನ್ನು ನುಡಿಯುವ ಪೂರ್ವದಲ್ಲಿ ದಾಖಲಾತಿಗಳನ್ನು ಪರಿಶೀಲಿಸಿರುವುದಿಲ್ಲ. ಯಾವ ದಿನಾಂಕದಂದು ನಿಪಿ-1 ಕ್ಕೆ ಸಹಿ ಮಾಡಿರುತ್ತೇನೆ ಎಂದು ನೆನಪಾಗುತ್ತಿಲ್ಲ. ನಿಪಿ-1 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.